AUGUST 19, 2024

AKASHAVANI - DHARWAD

PRADESH SAMACHARA (KANNADA) 07.05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಮೈಸೂರು ಪೇಂಟ್ಸ್ ಹಾಗೂ ವಾರ್ನಿಶ್ ಲಿಮಿಟೆಡ್ ಸಂಸ್ಥೆಗೆ, ಶೀಘ್ರ ಕಾಯಕಲ್ಪ – ಸಚಿವ ಎಂ.ಬಿ.ಪಾಟೀಲ.
- ರಾಜ್ಯದಲ್ಲಿ ನಿತ್ಯ, ಒಂದು ಕೋಟಿ ಲೀಟರ್ ಹಾಲು ಸಂಗ್ರಹಣೆ – ಸಚಿವ ಎನ್.ಚಲುವರಾಯಸ್ವಾಮಿ.
- 'ಅಮೃತ್ ಭಾರತ್ ಯೋಜನೆ'; ರಾಜ್ಯದ 61 ರೈಲ್ವೆ ನಿಲ್ದಾಣಗಳು ಮೇಲ್ದರ್ಜೆಗೆ – ಕೇಂದ್ರ ಸಚಿವ ವಿ.ಸೋಮಣ್ಣ.
- ಶ್ರಾವಣ ಮಾಸದ ಪೌರ್ಣಿಮೆ; ಇಂದು ರಕ್ಷಾ ಬಂಧನ ಸಂಭ್ರಮ.

<><><>

ಈಗ ವಾರ್ತೆಗಳ ವಿವರ

<><><>

ಇಂದು ವಿಶ್ವ ಸಂಸ್ಕೃತ ದಿನ. ವಿಶ್ವದ ಅತ್ಯಂತ ಪ್ರಾಚೀನ ಭಾಷೆ ಸಂಸ್ಕೃತ. ಹಲವು ಭಾಷೆಗಳಿಗೆ ತಾಯಿ ಆಗಿರುವ ಸಂಸ್ಕೃತವನ್ನು ಸಂಭ್ರಮಿಸಲು, 1969 ರಿಂದ ಆಗಸ್ಟ್ 19 ರಂದು, ವಿಶ್ವ ಸಂಸ್ಕೃತ ದಿನವನ್ನು ಆಚರಿಸಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮದಲ್ಲಿ ಇಂದಿಗೂ ಸಂಸ್ಕೃತ ವ್ಯವಹಾರ ಭಾಷೆಯಾಗಿದೆ. ಇಡೀ ಗ್ರಾಮ ಸಂಸ್ಕೃತ ಗ್ರಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವಿವಿಧೆಡೆ ಇಂದು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

<><><>

ಬೆಂಗಳೂರಿನ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, K.S.D.L. ಕಾರ್ಖಾನೆಯನ್ನು, ಪುನರುಜ್ಜೀವಿತಗೊಳಿಸಿ, ಲಾಭದತ್ತ ಮುನ್ನಡೆಸಿದಂತೆ, ಸರ್ಕಾರಿ ಸ್ವಾಮ್ಯದ, ಮೈಸೂರು ಪೇಂಟ್ಸ್ & ವಾರ್ನಿಶ್ ಲಿಮಿಟೆಡ್ ಸಂಸ್ಥೆಗೂ, ಸದ್ಯದಲ್ಲೇ ಕಾಯಕಲ್ಪ ನೀಡಲಿದ್ದೇವೆ ಎಂದು, ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಚಿವರು ಈ ವಿಷಯ ಪ್ರಕಟಿಸಿದ್ದಾರೆ. ಸರ್ಕಾರದ ಎಲ್ಲ ಕಟ್ಟಡಗಳಿಗೆ ಇನ್ನು ಮುಂದೆ, ಕಡ್ಡಾಯವಾಗಿ ಮೈಸೂರು ಪೇಂಟ್ಸ್ ತಯಾರಿಸಿದ ಬಣ್ಣಗಳನ್ನೇ ಬಳಸಲು, ನಿರ್ಧರಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ, ಸಂಸ್ಥೆ 500 ಕೋಟಿ ರೂಪಾಯಿ ಲಾಭ ಗಳಿಸುವ ಗುರಿಯನ್ನು ನಿಗದಿ ಪಡಿಸಲಾಗಿದೆ ಎಂದಿದ್ದಾರೆ. ನಾಲ್ವಡಿ ಕೃ ಷ್ಣರಾಜ ಒಡೆಯರ್ ಅವರು ಕಟ್ಟಿ ಬೆಳೆಸಿದ ಸಂಸ್ಥೆಗಳನ್ನು, ಅಭಿವೃದ್ಧಿಯತ್ತ ಕೊಂಡೊಯ್ಯಲು ಸರ್ಕಾರ ಬದ್ಧ ಎಂದು, ಎಂ.ಬಿ.ಪಾಟೀಲ ಹೇಳಿದ್ದಾರೆ.

<><><>

ರಾಜ್ಯದಲ್ಲಿ ನಿತ್ಯ, ಒಂದು ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಇದಕ್ಕೆ ಪೂರಕವಾಗಿ, ಮಾರುಕಟ್ಟೆಯನ್ನು ಸಹ ವಿಸ್ತರಿಸಲಾಗುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ನಾಗಮಂಗಲದ ಬೆಳ್ಳೂರು ಹೋಬಳಿಯ ಶಿವನಹಳ್ಳಿಯಲ್ಲಿ ನೂತನ ಡೇರಿ ಕಟ್ಟಡ ಉದ್ಘಾಟಿಸಿ, ಅವರು ಮಾತನಾಡಿದರು. ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಶಿವನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಸಂಗ್ರಹಿಸುವ ಹಾಲು, ದಿಲ್ಲಿಗೆ ಸರಬರಾಜಾಗಲಿದೆ. ಮಂಡ್ಯ ಜಿಲ್ಲೆಯ ಹೈನುಗಾರರಿಗೆ ಇದು ಸಂತಸದ ವಿ ಯವಾಗಿದೆ ಎಂದರು.

<><><>

ಹಾವೇರಿ ಜಿಲ್ಲೆಯ ವಿವಿಧ ತಾಲೂಕಿನ, ರೇ ್ಮೆ ಬೆಳೆಗಾರರಿಗೆ ಅನುಕೂಲ ಕಲ್ಪಿಸಲು, ರಾಣೆಬೆನ್ನೂರು ಹಾಗೂ ಹಾವೇರಿ ಮಧ್ಯದಲ್ಲಿ, ನಬಾರ್ಡ್ ಸಹಕಾರದಿಂದ, 15 ಕೋಟಿ ರೂಪಾಯಿ ವೆಚ್ಚದಲ್ಲಿ, ಸರ್ಕಾರಿ ಹೈಟೆಕ್ ರೇ ್ಮೆ ಗೂಡು ಮಾರುಕಟ್ಟೆ ಸ್ಥಾಪನೆಯಾಗಲಿದೆ ಎಂದು, ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಹೇಳಿದ್ದಾರೆ. ರಾಣೆಬೆನ್ನೂರಿನಲ್ಲಿ, ಸರ್ಕಾರಿ ಹೈಟೆಕ್ ರೇ ್ಮೆ ಗೂಡು ಮಾರುಕಟ್ಟೆಯ ಕಾಮಗಾರಿಗೆ, ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹಾವೇರಿ ಜಿಲ್ಲೆಯಲ್ಲಿ 8 ಸಾವಿರ ಎಕರೆ ಭೂಮಿಯಲ್ಲಿ, 224 ಗ್ರಾಮಗಳ 3 ಸಾವಿರ 500 ರೈತರು, ರೇ ್ಮೆ ಬೆಳೆ ಬೆಳೆಯುತ್ತಿದ್ದಾರೆ. ಪ್ರತಿ ದಿನ 3 ಟನ್ ರೇ ್ಮೆ ಗೂಡು ಉತ್ಪಾದನೆಯಾಗುತ್ತಿದೆ ಎಂದರು.

<><><>

ಕೃಷಿಕ ಕೆ.ಎಸ್. ಅಶೋಕಕುಮಾರ ಮೂಲತಃ, ದಕ್ಷಿಣಕನ್ನಡದ ಕರಿಕ್ಕಳದವರು. ಕೃಷಿಯಲ್ಲಿ ಸ್ನಾತಕೋತ್ತರ ಪದವಿಧರ. ಬೆಂಗಳೂರಿನ ದೇವನಹಳ್ಳಿ ವಿಮಾನ ನಿಲ್ದಾಣದ ಬಳಿ, 50 ಎಕರೆಯಲ್ಲಿ ಕೆಂಪು ಸೊಳೆಯ, ಚಂದ್ರ ಮತ್ತು ಶಂಕರ ಹಲಸನ್ನು ಪ್ರಧಾನವಾಗಿ, ಇತರೆ ಹತ್ತಾರು ವಿಧದ ಹಣ್ಣಿನ ಗಿಡಗಳನ್ನು ವಿಶೇಷವಾಗಿ ನೆಟ್ಟು ಪೋಷಿಸುತ್ತಿದ್ದಾರೆ. ಮಳೆ ಆಶ್ರಿತ, ಒಣ ಭೂಮಿ ಬೇಸಾಯದಲ್ಲಿ ತೊಡಗಿಕೊಂಡು, ನೀರಾವರಿ ಕೃಷಿಯಷ್ಟೇ ಆದಾಯ ಗಳಿಸುತ್ತಿರುವ ಸಾಹಸಿ. ಹುಣಸೆ, ನೇರಳೆ, ನೆಲ್ಲಿಗೂ ಜಾಗೆ ಕಲ್ಪಿಸಿದವರು. ಪ್ರದೇಶ ಸಮಾಚಾರಕ್ಕಾಗಿ, ಕೆ.ಎಸ್. ಅಶೋಕಕುಮಾರ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ತೋಟಿಗ ಕೆ.ಎಸ್. ಅಶೋಕಕುಮಾರ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಅಮೃತ್ ಭಾರತ್ ಯೋಜನೆ' ಯಡಿ, 2 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ರಾಜ್ಯದ 61 ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ತುಮಕೂರಿನ ಲೋಕೋಪಯೋಗಿ ಇಲಾಖೆಯ, ಪರಿವೀಕ್ಷಣಾ ಮಂದಿರದಲ್ಲಿ, ತಮ್ಮ ನೂತನ ಸಂಸದರ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತುಮಕೂರು ರೈಲ್ವೆ ನಿಲ್ದಾಣಕ್ಕೆ ಡಾಕ್ಟರ್ ಶಿವಕುಮಾರ ಸ್ವಾಮೀಜಿ ಅವರ ಹೆಸರನ್ನು, ನಾಮಾಂಕಿತಗೊಳಿಸಲು ನಿರ್ಧರಿಸಲಾಗಿದೆ. ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ ಕಾಯುತ್ತಿರುವುದಾಗಿ ಸಚಿವ ಸೋಮಣ್ಣ ಹೇಳಿದರು.

ಜಲ ಶಕ್ತಿ ಇಲಾಖೆಯ ವಿವಿಧ ಯೋಜನೆಗಳ ಅನು ್ಠಾನಕ್ಕೆ, ಕೇಂದ್ರ ಸರ್ಕಾರ ಸಿದ್ಧವಿದೆ. 40:60 ರ ಅನುಪಾತದಲ್ಲಿ, ವೆಚ್ಚ ಭರಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದರು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ, ಸಂಪೂರ್ಣ ಅನುಷ್ಠಾನಕ್ಕೆ ಒತ್ತು ನೀಡಿ, ಬಯಲು ಸೀಮೆ ರೈತರ ಜಮೀನುಗಳಿಗೆ, ನೀರು ಒದಗಿಸಲು ಕ್ರಮ ಕೈಗೊಳ್ಳುವುದಾಗಿ, ಸಚಿವ ಸೋಮಣ್ಣ ನುಡಿದರು.

<><><>

'ಸಮುದಾಯ ಬಾನುಲಿ ಬೆಳವಣಿಗೆ; ಅವಕಾಶಗಳು ಮತ್ತು ಸವಾಲುಗಳು' ಧ್ಯೇಯದೊಂದಿಗೆ, ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ, ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ, ರಾಜ್ಯದ 22 ಸಮುದಾಯ ಬಾನುಲಿ ಕೇಂದ್ರಗಳಿಂದ ಕಾರ್ಯಕ್ರಮ ನಿರ್ವಾಹಕರು ಪಾಲ್ಗೊಂಡಿದ್ದರು. ಕೃಷಿ ಎಫ್.ಎಮ್. 90.4 ಕೃಷಿ ಸಮುದಾಯ ಬಾನುಲಿ ಕೇಂದ್ರದ ಸಹಯೋಗದಲ್ಲಿ ಜರುಗಿದ, ರಾಜ್ಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ, ಮೈಸೂರು ಜಿಲ್ಲೆ, ಸರಗೂರು ತಾಲೂಕಿನ 'ಜನಧ್ವನಿ ಸಮುದಾಯ ಬಾನುಲಿ ಕೇಂದ್ರ'ದ ಕಾರ್ಯಕ್ರಮ ನಿರ್ವಾಹಕ ನಿಂಗರಾಜು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಿಂಗರಾಜು ಧ್ವನಿ 45 ಸೆಕೆಂದುಗಳು

<><><>

ರಕ್ಷಾ ಬಂಧನ ಹಬ್ಬವನ್ನು, ಶ್ರಾವಣ ಮಾಸದ ಪೌರ್ಣಿಮೆ ಅಥವಾ ನೂಲು ಹುಣ್ಣಿಮೆಯಾದ ಇಂದು, ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಸಹೋದರ ಸಹೋದರಿಯರ ನಡುವೆ, ಪ್ರೀತಿಯ ಬಂಧವನ್ನು ಮತ್ತಷ್ಟು ಗಟ್ಟಿಯಾಗಿಸುವ ಹಬ್ಬವಾಗಿ, ಆಚರಿಸಲ್ಪಡುತ್ತದೆ. ತಂಗಿಯ ರಕ್ಷಣೆ ಅಣ್ಣನಿಂದ, ಅಣ್ಣನ ರಕ್ಷಣೆ ತಂಗಿಯಿಂದ ಎಂಬ ಪರಸ್ಪರ ಭ್ರಾತೃತ್ವದ ಭಾವನೆಯನ್ನು, ದಟ್ಟಗೊಳಿಸುವ ಹಬ್ಬ ಇದಾಗಿದೆ. ರಕ್ಷಾ ಬಂಧನ ಆಚರಣೆಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಮಹತ್ವವಿದೆ. ಪ್ರತಿಯೊಬ್ಬ ಸಹೋದರಿ, ಸಮಾಜದ ದುಷ್ಟಶಕ್ತಿಗಳಿಂದ ರಕ್ಷಿಸೆಂದು, ತನ್ನ ಸಹೋದರನ ಮುಂಗೈಗೆ ರಾಖಿಯನ್ನು ಕಟ್ಟುತ್ತಾಳೆ. ಪ್ರತಿಯೊಬ್ಬ ಸಹೋದರ ಈ ಸಮಯದಲ್ಲಿ ಸಹೋದರಿಯೆಡೆಗೆ ತನ್ನ ಭ್ರಾತತ್ವ ಪ್ರೇಮವನ್ನು ಉಜ್ವಲಗೊಳಿಸುವ ಸಂಕಲ್ಪ, ರಕ್ಷಾ ಬಂಧನ ಹಬ್ಬದ ವಿಶೇಷ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ರಕ್ಷಾ ಬಂಧನ ಶುಭಾಶಯ ಕೋರಿದ್ದಾರೆ.

<><><>

ಕರ್ನಾಟಕ ನ್ಯಾಯಾಂಗ ಅಕಾದೆಮಿಯ, 25ನೇ ವರ್ಷದ ವಾರ್ಷಿಕೋತ್ಸವವನ್ನು, ರಾಜ್ಯ ಹೈಕೋರ್ಟ್ ಬೆಂಗಳೂರಿನಲ್ಲಿ, ಆಯೋಜಿಸಿತ್ತು.

ಸರ್ವೋಚ್ಚ ನ್ಯಾಯಾಲಯದ ನ್ಯಾಯುಮೂರ್ತಿ, ಅರವಿಂದ ಕುಮಾರ ಮಾತನಾಡಿ, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಒತ್ತು ನೀಡಬೇಕು. ದಕ್ಷತೆ ಹಾಗೂ ಪ್ರಾಮಾಣಿಕತೆ ನ್ಯಾಯಾಂಗದ ಆಧಾರ ಎಂದರು.

ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರು ಮಾತನಾಡಿ, ಧರ್ಮೋ ರಕ್ಷತಿ ರಕ್ಷಿತಃ ನ್ಯಾಯವನ್ನು ಎತ್ತಿ ಹಿಡಿಯವುದು, ನ್ಯಾಯಾಂಗದ ಆದ್ಯತೆ ಎಂದರು.

ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಎನ್.ವಿ. ಅಂಜರಿಯಾ ಮಾತನಾಡಿ, ಕರ್ನಾಟಕ ನ್ಯಾಯಾಂಗ ಅಕಾದೆಮಿ, 25ನೇ ವರ್ಷ ಪೂರೈಸುತ್ತಿದ್ದು, ಸಮಾಜಕ್ಕೆ ಆಧಾರ ಸ್ತಂಭವಾಗಿದೆ ಎಂದರು.

<><><>

ಪ್ರ ಪ್ರಥಮ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು, ಬರುವ ಶುಕ್ರವಾರ 23ನೇ ತಾರೀಖು, ದೇಶಾದ್ಯಂತ ಆಚರಿಸಲಾಗುತ್ತಿದೆ.ದಕ್ಷಿಣ ಧ್ರುವದಲ್ಲಿ, ಚಂದ್ರಯಾನ–3ರ ಐತಿಹಾಸಿಕ ಪದಾರ್ಪಣೆಯ ಸ್ಮರಣಾರ್ಥ, ರಾಷ್ಟ್ರೀಯ ಬಾಹ್ಯಾಕಾಶ ದಿನದಂದು ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ quiz.mygov.in ಗೆ ಭೇಟಿ ನೀಡಬಹುದು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಚಿಕ್ಕಬಳ್ಳಾಪುರದ ಹಸಿರು ಸ್ವಯಂ ಸೇವಾ ಸಂಸ್ಥೆ, ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಅರಣ್ಯ ಪ್ರದೇಶದಲ್ಲಿ, ಬೀಜದುಂಡೆ ಹರಡುವ ಕಾರ್ಯಕ್ರಮ ಆಯೋಜಿಸಿತ್ತು.

ಶಿವಮೊಗ್ಗ ಜಿಲ್ಲೆಯ ಕೊರಮ ಹಾಗೂ ಕೊರಚ ಸಮಾಜದ ಆಶ್ರಯದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಕುವೆಂಪು ರಂಗಮಂದಿರದಲ್ಲಿ, ಶರಣ ಶ್ರೀ ನುಲಿನ ಚಂದಯ್ಯ ಜಯಂತಿ ಕಾರ್ಯಕ್ರಮ ಆಯೋಜಿತವಾಗಿದೆ.

ಮುತ್ಸದ್ದಿ ಡಿ. ದೇವರಾಜ ಅರಸು ಅವರ, 109ನೇ ಜನ್ಮ ದಿನಾಚರಣೆ ಕಾರ್ಯಕ್ರಮ, ನಾಳೆ 20ನೇ ತಾರೀಖು, ರಾಜ್ಯಾದ್ಯಂತ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮೈಸೂರು ಪೇಂಟ್ಸ್ ಹಾಗೂ ವಾರ್ನಿಶ್ ಲಿಮಿಟೆಡ್ ಸಂಸ್ಥೆಗೆ, ಶೀಘ್ರ ಕಾಯಕಲ್ಪ – ಸಚಿವ ಎಂ.ಬಿ.ಪಾಟೀಲ.
- ರಾಜ್ಯದಲ್ಲಿ ನಿತ್ಯ, ಒಂದು ಕೋಟಿ ಲೀಟರ್ ಹಾಲು ಸಂಗ್ರಹಣೆ – ಸಚಿವ ಎನ್.ಚಲುವರಾಯಸ್ವಾಮಿ.
- 'ಅಮೃತ್ ಭಾರತ್ ಯೋಜನೆ'; ರಾಜ್ಯದ 61 ರೈಲ್ವೆ ನಿಲ್ದಾಣಗಳು ಮೇಲ್ದರ್ಜೆಗೆ – ಕೇಂದ್ರ ಸಚಿವ ವಿ.ಸೋಮಣ್ಣ.
- ಶ್ರಾವಣ ಮಾಸದ ಪೌರ್ಣಿಮೆ; ಇಂದು ರಕ್ಷಾ ಬಂಧನ ಸಂಭಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ